| **Headline:** CII-Exim Bank Award for Business Excellence to NSE | |
|---|---|
| **Source:** Prajavani | **Date:** 28 November 2016 |

# ‘ಎನ್‌ಎಸ್‌ಇ’ಗೆ ಸಿಐಐ ಪ್ರಶಸ್ತಿ

ಬೆಂಗಳೂರು: ದೇಶದ ಅತಿದೊಡ್ಡ ಷೇರು ವಿನಿಮಯ ಸಂಸ್ಥೆಯಾಗಿರುವ ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ), ಪ್ರತಿಷ್ಠಿತ ಸಿಐಐ ಎಕ್ಸಿಂ ಬ್ಯಾಂಕ್‌ನ ವಹಿವಾಟು ಶ್ರೇಷ್ಠತೆ ಪ್ರಶಸ್ತಿ ಪಡೆದಿದೆ.

ಬೆಂಗಳೂರಿನಲ್ಲಿ ನಡೆದ ಸಿಐಐ ರಾಷ್ಟ್ರೀಯ ಗುಣಮಟ್ಟ ಶೃಂಗಸಭೆಯಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು. ‘ಎನ್‌ಎಸ್‌ಇ’ ಸತತ ಎರಡನೆ ವರ್ಷ ಈ ಪ್ರಶಸ್ತಿ ಪಡೆಯುತ್ತಿದೆ. ‘ಎನ್‌ಎಸ್‌ಇ’ಯ ನಾಯಕತ್ವ ಗುಣ, ನೀತಿ ನಿರೂಪಣೆ ಮತ್ತು ಮೌಲ್ಯ ಪ್ರತಿಪಾದನೆಗೆ ಈ ಪ್ರಶಸ್ತಿ ಲಭ್ಯವಾಗಿದೆ.